ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ**

ಸ್ವಚ್ಛ ಭಾರತ
ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ



# ಮೂಲ್ಕಿ , ಮೂಡಬಿದಿರೆ ತಾಲ್ಲೂಕುಗಳಿಗೆ ವರವಾದ **ತೆಂಕ ಎಡಪದವು ಎಂಆರ್‌ಎಫ್ ಘಟಕ;**

## ಕಸದ ಸಮಸ್ಯೆಯಿಂದ ಮುಕ್ತಿ

ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯು ಗ್ರಾಮೀಣ ಭಾಗದ ಕಸದ ಸಮಸ್ಯೆಗೆ ಪರಿಹಾರ ಒದಗಿಸುವ ಜೊತೆಗೆ ತ್ಯಾಜ್ಯವನ್ನು ಸಂಪನ್ಮೂಲವಾಗಿ ಪರಿವರ್ತಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ. ಸ್ವಚ್ಛ ಸಂಕೀರ್ಣ ಘಟಕ, ಎಂಆರ್‌ಎಫ್ ಘಟಕಗಳ ನಿರ್ಮಾಣದ ಮೂಲಕ ತ್ಯಾಜ್ಯದ ಸಮರ್ಪಕ ವಿಲೇವಾರಿ, ಮರುಬಳಕೆಯನ್ನು ಸಾಧ್ಯವಾಗಿಸಿದೆ. ಇದೇ ಹಾದಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ದಕ್ಷಿಣ ಕನ್ನಡ ಜಿಲ್ಲೆಯ ತೆಂಕ ಎಡಪದವು ಎಂಆರ್‌ಎಫ್ ಘಟಕವು ಹಳ್ಳಿಗಳ ಪಾಲಿಗೆ ವರದಾನವಾಗಿದೆ.

ತೆಂಕ ಎಡಪದವು ಎಂಆರ್‌ಎಫ್ ಘಟಕ 2023ರ ಜ.26 ರಂದು ಕಾರ್ಯಾರಂಭಿಸಿತು. ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆ ಮತ್ತು ಮೂಲ್ಕಿ ತಾಲೂಕುಗಳ 51 ಗ್ರಾಮ ಪಂಚಾಯತ್‌ಗಳ ಒಣ ಕಸಗಳನ್ನು ಅತ್ಯಂತ ಯಶಸ್ವಿಯಾಗಿ ವಿಲೇವಾರಿ ಮಾಡುತ್ತಾ ಬಂದಿದೆ. **ಈ ಘಟಕ ಈಗಾಗಲೇ ಒಟ್ಟು 15 ಲಕ್ಷ ಕೆಜಿ ಒಣಕಸ ಸ್ವೀಕಾರ ಮಾಡಿದ್ದು, ಒಟ್ಟು 6.15 ಲಕ್ಷ ಕೆಜಿ ಕಸವನ್ನು ಪರಿಷ್ಕರಿಸಿ, ಪ್ರತ್ಯೇಕಿಸಿದೆ. 9.23 ಲಕ್ಷ ಕೆ.ಜಿ. ತ್ಯಾಜ್ಯವನ್ನು ಮರುಬಳಕೆ ಉಪಯೋಗಕ್ಕೆ ಕಳುಹಿಸಿಕೊಟ್ಟಿದೆ.**



**3.73**

**ಕೋಟಿ ರೂ. ವೆಚ್ಚದಲ್ಲಿ ಎಂಆರ್‌ಎಫ್ ಘಟಕ ನಿರ್ಮಾಣ**

ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನದಲ್ಲಿ ಒಟ್ಟು 3.73 ಕೋಟಿ ರೂ. ವೆಚ್ಚದಲ್ಲಿ ತೆಂಕಎಡಪದವಿನ ಈ ಎಂಆರ್ ಎಫ್ ಘಟಕವನ್ನು ನಿರ್ಮಿಸಲಾಗಿದೆ. ಘಟಕವು 10,000 ಚದರ ಅಡಿ ವಿಸ್ತೀರ್ಣ ಹೊಂದಿದ್ದು, ಪ್ರತಿದಿನ 10 ಟನ್ ಒಣ ತ್ಯಾಜ್ಯವನ್ನು ವಿಂಗಡಿಸಿ, ನಿರ್ವಹಿಸುವ ಸಾಮರ್ಥ್ಯ ಹೊಂದಿದೆ. **99 ಗ್ರಾಮಗಳ ಮತ್ತು ಸುಮಾರು 1 ಲಕ್ಷ ಮನೆಗಳು ಮತ್ತು 5 ಸಾವಿರ ವಾಣಿಜ್ಯ ಅಂಗಡಿಗಳ ಒಣ ತ್ಯಾಜ್ಯವನ್ನು ನಿರ್ವಹಿಸುವುದು ಘಟಕದ ವಿಶೇಷ.**

# ಝೀರೋ ರುಪೀಸ್ ಮಾದರಿಯಲ್ಲಿ ಎಂಆರ್‌ಎಫ್ ಘಟಕ ಕಾರ್ಯಾಚರಣೆ

ದಕ್ಷಿಣಕನ್ನಡ ಜಿಲ್ಲೆಯ ವಿವಿಧ ಗ್ರಾಮಗಳಿಂದ ಘಟಕಕ್ಕೆ ಬರುವ ಒಣತ್ಯಾಜ್ಯವನ್ನು ಇಲ್ಲಿನ ಸಿಬ್ಬಂದಿ 30ಕ್ಕೂ ಹೆಚ್ಚು ವಿಭಾಗಗಳಾಗಿ ವಿಂಗಡಿಸುತ್ತಾರೆ. ಬಳಿಕ ವಿಂಗಡಿಸಲಾದ ವಸ್ತುಗಳನ್ನು ಮರುಬಳಕೆಗೆ ಕಳುಹಿಸಲಾಗುತ್ತದೆ. ಕೆಲವನ್ನು ಸಿಮೆಂಟ್ ಕಾರ್ಖಾನೆಗಳಿಗೆ ನೀಡಲಾಗುತ್ತದೆ. ಇನ್ನು ಈ ಘಟಕ ಪಂಚಾಯತ್ ಗಳಿಂದ ಯಾವುದೇ ಹಣವನ್ನು ಬಯಸುವುದಿಲ್ಲ. ಇದು ಝೀರೋ ರುಪೀಸ್ ಮಾದರಿಯಲ್ಲಿ ನಡೆಯುತ್ತಿರುವ ಘಟಕ. ಒಟ್ಟು 20 ಮಹಿಳಾ ಸಿಬ್ಬಂದಿ ಹಾಗೂ 10 ಪುರುಷ ಸಿಬ್ಬಂದಿ ಈ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ತೆಂಕ ಎಡಪದವಿನಲ್ಲಿ ಎಂಆರ್‌ಎಫ್ ಘಟಕ ನಿರ್ಮಾಣದ ಪ್ರಸ್ತಾವ ಬಂದಾಗ ತೀವ್ರ ವಿರೋಧ ವ್ಯಕ್ತವಾಗಿತ್ತು. ಇದರಿಂದ ಊರಿನಲ್ಲಿ ಮಾಲಿನ್ಯ ಉಂಟಾಗುತ್ತದೆ ಎಂಬ ಆರೋಪ ಕೇಳಿಬಂದಿತ್ತು. ಆದರೆ ಘಟಕದ ಕಾರ್ಯಾಚರಣೆಯಿಂದ ತೊಂದರೆಯಿಲ್ಲ ಎನ್ನುವುದನ್ನು ಜನರಿಗೆ ಸಂಪೂರ್ಣ ಮನವರಿಕೆ ಮಾಡಿ ಒಪ್ಪಿಸಲಾಗಿದೆ. ಈಗ ಊರಿನ ಜನರೇ ಎಂಆರ್‌ಎಫ್ ಘಟಕದ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಆಡುತ್ತಾರೆ. ಒಟ್ಟಾರೆಯಾಗಿ ಈ ಎಂಆರ್‌ಎಫ್ ಘಟಕದ ನಿರ್ಮಾಣದಿಂದಾಗಿ ಗ್ರಾಮೀಣ ಭಾಗದ ಕಸದ ಸಮಸ್ಯೆಗೆ ಶಾಶ್ವತ ಪರಿಹಾರ ಸಿಕ್ಕಿದೆ. ಗ್ರಾಮ ಪಂಚಾಯತ್‌ಗಳ ತಲೆನೋವು ಕಡಿಮೆಯಾಗಿದೆ. ರಸ್ತೆ ಪಕ್ಕದಲ್ಲಿ ಗ್ರಾಮೀಣ ಭಾಗದಲ್ಲಿ ಎಲ್ಲೆಂದರಲ್ಲಿ ಕಸ ಎಸೆಯುವುದು ಕಡಿಮೆಯಾಗಿದೆ.

